‘ಮನುಷ್ಯ ಒಬ್ಬರೇ ಇರುತಾ ಇದ್ದರು... ಮದುವೆ ಆಗಿರಲಿಲ್ಲ. ಅಂಡ್ ವಿ ಹ್ಯಾಡ್ ಲಾಟ್ಸ್ ಆಫ್ ಕಾಮನ್ ಇಂಟರೆಸ್ಟ್ಸ್... ಸ್ವಲ್ಪ ಸ್ಪಿರಿಚುಅಲ್ ಮನುಷ್ಯ. ಸ್ವಲ್ಪ ಏನು, ಸಂಪೂರ್ಣವಾಗಿ ಅಧ್ಯಾತ್ಮದಲ್ಲಿ ತೊಡಗಿದಂಥವರು... ವಿ ವುಡ್ ಕ್ವೈಟ್ ಆಫನ್ ಡಿಸ್ಕಸ್ ಭಗವದ್ಗೀತಾ ಓವರ್ ಎ ಪೆಗ್ ಆರ್ ಟೂ! ಆಸಾಮಿ ತುಂಬಾ ಅಂದರೆ ತುಂಬಾ ಓದಿಕೊಂಡಿದ್ದರು... ಅವರಿಗೆ ತಮ್ಮವರು ಅಂತ ಯಾರೂ ಇರಲಿಲ್ಲ. ಅಲ್ಲದೆ, ಸ್ಪಿರಿಚುಅಲೀ ಅವೇಕನ್ ಆದಾಗ – ಅಂದರೆ ಆಧ್ಯಾತ್ಮಿಕವಾಗಿ ಎಚ್ಚೆತ್ತಿರುವಾಗ – ತನ್ನೊಳಗಿರುವ ಚೈತನ್ಯಕ್ಕೆ ಇಡೀ ಜಗತ್ತೇ ಒಂದು ಅನಿಸುತ್ತಂತೆ... ಹಾಗೆ ಹೇಳುತಾ ಇದ್ದರು. ತನ್ನ ಬದುಕಿನ ಒಳಹಿನ್ನೆಲೆ ತನಗೆ ಮುಖ್ಯವೇ ಅಲ್ಲ ಅಂತ ಅನ್ನೋರು...’

‘ಐ ಸೀ...’

‘ಸಮ್ ಹವ್, ಮಿ ಅಂಡ್ ವಿರಾಟ್ ವರ್ ಡ್ರಾನ್ ಟು ಹಿಮ್... ಮನುಷ್ಯನಲ್ಲಿ ಒನ್ನಮೂನೆ ಚುಂಬಕವಾದ ಶಕ್ತಿ ಇತ್ತು. ದಿನದಿಂದ ದಿನಕ್ಕೆ ನಮ್ಮನ್ನ ಸೆಳೆದರು... ಸೆಳೆಯುತ್ತಲೇ ಹೋದರು... ನಮ್ಮ ನಡುವೊಂದು ಕಾಸ್ಮಿಕ್ ಸಂಬಂಧ ಇದೆ ಅಂತ ಹೇಳೋರು...’

‘ಸರಿ...’

‘ಇವಿಷ್ಟೂ ಹಿನ್ನೆಲೆ ಕಣೋ, ಸರಸ್... ಇದರಾಚೆ ನನಗೆ ಆತನ ಬಗ್ಗೆ ಬೇರೆ ಏನೂ ಗೊತ್ತಿಲ್ಲ... ನಿನ್ನೆ ಬೆಳಿಗ್ಗೆ, ಮನುಷ್ಯ ಎಂದಿನಂತೆ ಪಾರ್ಕಿಗೆ ಬರಲಿಲ್ಲ... ಸರಿ... ಫೋನು ಮಾಡಿದಿವಿ. ನೋ ರೆಸ್ಪಾನ್ಸ್ ಬಂತು... ನಾವು ಮೂರೂ ಜನ ನಿನ್ನೆ – ಇಲ್ಲೇ ಚಿಂತಾಮಣಿಯ ಹತ್ತಿರ ಗುರು ಫ್ರೆಡ್ಡಿ ಅಂತ ಒಬ್ಬರಿದ್ದಾರೆ, ಅವರನ್ನ ಭೇಟಿ ಮಾಡೋದಿತ್ತು...’

‘ಏನು ಹೆಸರು ಅಂದೆ?’

‘ಗುರು ಫ್ರೆಡ್ಡಿ...’

‘ಗುರೂಪ್ ರೆಡ್ಡಿನಾ?’

‘ನೋ ನೋ... ಅವರ ಹೆಸರು ಫ್ರೆಡ್ಡಿ ಅಂತ. ಜರ್ಮನಿಯವರು ಆತ... ಸಂತನಂತಹ ಮನುಷ್ಯ. ಚಿಂತಾಮಣಿಯ ಹತ್ತಿರದ ಬೆಟ್ಟದ ಮೇಲೆ ಪುಟ್ಟದೊಂದು ಕುಟೀರ ಕಟ್ಟಿಕೊಂಡು ಇದ್ದಾರೆ. ಎಲ್ಲರೂ ಆತನನ್ನ ಗುರು ಫ್ರೆಡ್ಡಿ ಅಂತ ಕರೀತಾರೆ’

‘ಓಹ್ ಓಕೆ...’

‘ಕೇಟ್ ಮತ್ತು ಫ್ರೆಡ್ಡಿ ತುಂಬಾ ಫ್ರೆಂಡ್ಸ್ ಆಗಿದ್ದರು. ಆಧ್ಯಾತ್ಮಿಕ ಸಂಗತಿಗಳನ್ನ ಚರ್ಚಿಸೋರು...’

‘ಓಕೆ... ಗೋ ಆನ್...’

‘ಹ್ಞಾಂ... ನಿನ್ನೆ – ನಾವು ಮೂರೂ ಜನ ಗುರು ಫ್ರೆಡ್ಡಿ ಹತ್ತಿರ ಹೋಗಬೇಕಿತ್ತು... ಸರಿ, ಈ ಕೇಟ್ ಯಾವಾಗ ನಮಗೆ ಫೋನಿನಲ್ಲೂ ಸಿಗಲಿಲ್ಲವೋ, ವಿರಾಟ್ – ಸೀದಾ ಅವರನ್ನ ಹುಡುಕಿಕೊಂಡು ಮನೆಯವರೆಗೂ ಹೋದ... ನೋಡಿದರೆ ಮಲಗಿದ್ದು ಮಲಗಿದ ಹಾಗೇ ಇತ್ತು... ಅಂಡ್ ಹಿ ವಾಸ್ ನೋ ಮೋರ್! ಹೋಗಿಬಿಟ್ಟಿದ್ದರು...’ ಶರ್ಲೀ ವರ್ಕಿ ಮಾತು ತಡೆದು ಹೇಳಿದಳು. ‘...ಅಂಡ್ ಯು ನೋ ವಾಟ್ – ವಿ ಮಿಸ್ಸ್ ಹಿಮ್ ಎ ಲಾಟ್!!’

ಈ ಕಡೆಯ ಮಾತನ್ನು ಹೇಳುವಾಗ ಶರ್ಲೀ ವರ್ಕಿ ಕೊಂಚ ಗದ್ಗದಿಸಿದಳೇನೋ... ಆತನನ್ನು ಮಿಸ್ ಮಾಡುತೀನಿ... ಅಂತನ್ನುವಾಗ, ಕೊಂಚ ಅತ್ತಂತೆಯೂ ಅನ್ನಿಸಿಬಂತು. ‘ಮಲಗಿದಂತೆಯೇ ಇದ್ದರು, ಸರಸ್... ತಲೆಕೆಳಗಿನ ದಿಂಬಿನ ಅಡಿಯಲ್ಲೊಂದು ಕಾಗದ ಇತ್ತು. ಬಹುಶಃ, ಸಾಯುತೀನಿ ಅಂತ ಗೊತ್ತಿತ್ತು ಅನಿಸುತ್ತೆ... ನಾನು ಯಾವಾಗಲೇ ಸತ್ತರೂ ದಿಂಬಿನ ಕೆಳಗೆ ಏನೋ ಬರೆದಿಟ್ಟಿರುತೀನಿ, ನೋಡಿ – ಅಂತ ಆಗಾಗ ಹೇಳೋರು... ಮೊನ್ನೆ ಕೂಡ ವಿರಾಟ್‌ಗೆ ಹೇಳಿದ್ದರಂತೆ!’ ಈ ಮಾತು ಹೇಳುವಾಗ ಹೆಣ್ಣಿನ ಮನಸೊಳಗಿನ ದುಃಖ ನಿಚ್ಚಳಿಸಿ ಕೇಳಿಬಂತು. ಒಂದೆರಡು ಸಲ ಬಿಕ್ಕಿದಳು